ದಿನಾಂಕ : 24.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯ ಪರವಾಗಿ ಶ್ರೀ ಆರ್.ವಿ.ಆರ್. ವಕೀಲರಿಂದಃ**

ಪ್ರತಿವಾದಿಯು ನನ್ನ ಅಣ್ಣ. ನನ್ನ ಜಮೀನು ನನಗೆ ಬೇಕು ಎಂದು ಈ ದಾವೆ ಹಾಕಿದ್ದೇನೆ. ನನ್ನ ತಂದೆಯ ಹೆಸರು ವೆಂಕಟರವಣಪ್ಪ. ಅವರಿಗೆ ಇಬ್ಬರು ಮಕ್ಕಳು. ನನ್ನ ತಾಯಿಯ ಹೆಸರು ವೆಂಕಟಲಕ್ಷ್ಮಮ್ಮ. ಅವರು ಮೃತಪಟ್ಟು ಎಷ್ಟು ವರ್ಷವಾಗಿದೆ ಎಂದರೆ ಸಾಕ್ಷಿಯು ನನಗೆ ನೆನಪು ಬರುವಷ್ಟರಲ್ಲಿ ಮೃತಪಟ್ಟಿದ್ದರು ಎಂದು ಹೇಳುತ್ತಾರೆ. ನನ್ನನ್ನು ನನ್ನ ಅಜ್ಜಿ ಲಕ್ಷ್ಮಮ್ಮನವರು ಸಾಕಿರುತ್ತಾರೆ. ನನ್ನ ಚಿಕ್ಕಮ್ಮನ ಹೆಸರು ಲಕ್ಷ್ಮಮ್ಮನ ಎಂದರೆ ಸರಿ. ನನ್ನ ತಾಯಿ ಮೃತಪಟ್ಟ ನಂತರ ಆಕೆಯನ್ನು ನನ್ನ ತಂದೆ ವಿವಾಹವಾಗಿರುತ್ತಾರೆ ಎಂದರೆ ಸರಿ. ಅವರು ಒಂದು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರಿಗೆ ಇಬ್ಬರು ಮಕ್ಕಳು ಅವರುಗಳ ಹೆಸರು ನರಸಿಂಹಪ್ಪ ಮತ್ತು ಚೌಡಮ್ಮ. ಅವರು ಈಗ ಬದುಕಿರುತ್ತಾರೆ. ಈ ದಾವೆ ಹಾಕುವಾಗ ನನ್ನ ಚಿಕ್ಕಮ್ಮ ಲಕ್ಷ್ಮಮ್ಮನವರು ಬದುಕಿದ್ದರು ಎಂದರೆ ಸರಿ. ನನ್ನ ಚಿಕ್ಕಮ್ಮ ಮತ್ತು ಆಕೆಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಾತನ ಹೆಸರು ಪುಳ್ಳಪ್ಪ. ಅವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಆದರೆ ಸರ್ವೆ ನಂ.**18** ರಲ್ಲಿ **2** ಎಕರೆ **31** ಗುಂಟೆ ಆಸ್ತಿ ಇತ್ತು. ನನ್ನ ಹೆಸರಿನಲ್ಲಿ ಎರಡು ಆಸ್ತಿಗಳು ಇವೆ. ಸದರಿ ಆಸ್ತಿಗಳು ಮಲ್ಲಮಟ್ಟಕಪಲ್ಲಿ ಗ್ರಾಮದಲ್ಲಿ ಇವೆ. ಸಾಕ್ಷಿ ಮುಂದುವರೆದು ನಾನು **8** ಗುಂಟೆ ಆಸ್ತಿಯನ್ನು ಕೊಂಡುಕೊಂಡಿದ್ದೇನೆ ಎಂದು ಹೇಳುತ್ತಾರೆ. ನನಗೆ **36** ಸರ್ವೆ ನಂಬರು ಅಸ್ತಿಗಳು ಇವೆ ಆದರೆ ಅವುಗಳ ನಿಖರವಾದ ಸರ್ವೆ ನಂಬರು ನನಗೆ ಗೊತ್ತಿಲ್ಲ. ಅವುಗಳ ಮುಟೇಶನ್ ನನ್ನ ಹೆಸರಿಗೆ ಆಗಿದೆ. ಅದರ ಪ್ರಕಾರ ಪಹಣಿ ಸಹ ಬರುತ್ತಿವೆ. ಆ ರೀತಿ ನನ್ನ

ಹೆಸರಿಗೆ ಮುಟೇಶನ್ ಮಾಡಿಸಿಕೊಂಡು ಸುಮಾರು **20** ವರ್ಷವಾಗಿದೆ. ಪುಳ್ಳಪ್ಪನ ಮೊಮ್ಮಕ್ಕಳಾದ ಶ್ರೀರಾಮಪ್ಪ ಬಿನ್ ವೆಂಕಟರವಣ ಎಂದರೆ ನಾನು. ಅವರಿಗೆ ಇಬ್ಬರು ಮಕ್ಕಳು ಅದು ನಾನು ಮತ್ತು ಪ್ರತಿವಾದಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯನ್ನು ಹಕ್ಕು ಬದಲಾವಣೆ ವಹಿ ಎಂದು ಗುರುತಿಸುತ್ತಾರೆ. ಅದನ್ನು ನಿಡಿ **1** ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯ ಪ್ರಕಾರ ನನ್ನ ತಾತನ ಆಸ್ತಿಗಳು ನಿಡಿ **1** ರಂತೆ ನನ್ನ ಹೆಸರಿಗೆ ಆಗಿರುತ್ತವೆ ಮತ್ತು ದಾವಾಆಸ್ತಿಯು ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಅಂದಿನಿಂದ ನಿಡಿ **1** ಆಸ್ತಿಯಲ್ಲಿ ನೀವು ವ್ಯವಸಾಯ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ನನ್ನ ಭಾಗದ ಜಮೀನಿನಲ್ಲಿ ನಾನು ಮತ್ತು ಪ್ರತಿವಾದಿ ಭಾಗದ ಜಮೀನಿನಲ್ಲಿ ಅವರು ವ್ಯವಸಾಯ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಅದರ ಪ್ರಕಾರ ನನ್ನ ಆಸ್ತಿಗಳು ನನ್ನ ಹೆಸರಿಗೆ ಹಾಗೂ ಪ್ರತಿವಾದಿಯ ಆಸ್ತಿಗಳು ಅವರ ಹೆಸರಿಗೆ ಪಹಣಿಗಳು ಬರುತ್ತಿವೆ ಎಂದರೆ ಸರಿ. ಪ್ರತಿವಾದಿಯ ಪಾಲಿಗೆ ಹೋದಂತಹ ಆಸ್ತಿಯು ಆತನ ಹೆಸರಿನಲ್ಲಿ ಇದ್ದು ಅವರು ಆಸ್ತಿಯನ್ನು ಕಬಳಿಸಲು ಈ ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ದಾವಾಆಸ್ತಿಯ ಆಧಾರದ ಮೇಲೆ ಸಾಲ ತೆಗೆಯಲು ಹೋದಾಗ ತಕರಾರು ಸಲ್ಲಿಸಿರುತ್ತೇನೆಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಆಸ್ತಿಯ ಮೇಲೆ ಸಾಲ ತೆಗೆಯುವುದು ಬೇಡ ಅವರ ಆಸ್ತಿಯ ಮೇಲೆ ಸಾಲ ತೆಗೆಯಲಿ ಎಂದು ತಕರಾರು ಸಲ್ಲಿಸಿರುತ್ತೇನೆಂದು ಹೇಳಿರುತ್ತಾರೆ. ಭಾಗವಾದ ನಂತರ ಈ ದಾವೆ ಹಾಕಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ನನ್ನ ಹೆಸರಿನಲ್ಲಿ ಇರುವ ಆಸ್ತಿಯಲ್ಲಿಯೂ ಸಹ ಅವರು ಭಾಗ ತೆಗೆದುಕೊಳ್ಳಲಿ ಮತ್ತು ದಾವಾಆಸ್ತಿಯ ಮೇಲೆ ನನಗೆ ಭಾಗವಿದೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಭಾಗವಾದ ನಂತರ ಪ್ರತಿವಾದಿಯ ಪಾಲಿಗೆ ಬಂದ

ಆಸ್ತಿಯಲ್ಲಿ ಸ್ವಾಧೀನ ಹೊಂದಿ ಅವರು ಅನುಭವಿಸುತ್ತಿದ್ದಾರೆ ಆದರೆ ನಾನು ಅವರ ಆಸ್ತಿಗೆ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ. ಜೀವನೋಪಾಯಕ್ಕಾಗಿ ಪ್ರತಿವಾದಿ ಮತ್ತು ಮಕ್ಕಳು ಬೆಂಗಳೂರಿನಲ್ಲಿ ನೆಲಸಿದ್ದು ದಾವಾಆಸ್ತಿಯನ್ನು ನೋಡಿಕೊಳ್ಳಲು ನನಗೆ ವಹಿಸಿ ಹೋಗಿದ್ದರು ಅದನ್ನು ದುರಪಯೋಗ ಮಾಡಿಕೊಂಡು ಈ ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ದಾವಾಆಸ್ತಿಯು ಪ್ರತಿವಾದಿಯ ವೈಯಕ್ತಿಕ ಆಸ್ತಿಯದ ಕಾರಣ ನಾನು ಅದರಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳು ಈಗಾಗಲೇ ಭಾಗವಾಗಿರುವುದರಿಂದ ಪುನಃ ಅದರಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ಲಕ್ಷ್ಮಕ್ಕನ ಮಕ್ಕಳು ಸಹ ಭಾಗ ತೆಗೆದುಕೊಂಡು ಬೇರೆ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಭಾಗವಾಗಿದೆ ಆದರೆ ದಾವಾಆಸ್ತಿ ಭಾಗವಾಗಿಲ್ಲ ಎಂದು ಹೇಳುತ್ತಾರೆ. ದಾವಾಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

**ಓದಿ ಹೇಳಿ ಕೇಳಿ ಸರಿಯಾಗಿದೆ.**

**(ಮನು ಬಿ.ಕೆ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ